<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.</u>

**<u>S.C. No. 274/2021</u>**

ಪಿರ್ಯಾದುದಾರರು : ಸರ್ಕಾರದ ಪರ ಬ್ಯಾಡರಹಳ್ಳಿ ಪೊಲೀಸರು

- ವಿರುದ್ಧ -

ಆರೋಪಿಗಳು

**A1** ಹೇಮಂತ್ ಕುಮಾರ್ ಜೆ,
ಬಿನ್ ಲೇಟ್ ಎಂ. ಜಯರಾಮ್,
38 ವರ್ಷ,
ವಾಸಃ ನಂ. 1028, 3 ನೇ ಮೈನ್,
2 ನೇ ತಿರವು, ಉಪಕಾರ್ ಲೇಔಟ್,
ಬೆಂಗಳೂರು.
ಸ್ವಂತ ವಾಸ : ನಂ. 11, 8 ನೇ ತಿರುವು,
14 ನೇ ಮೈನ್ ರಸ್ತೆ,
ಆರ್.ಪಿ.ಸಿ. ಲೇಔಟ್
ವಿಜಯನಗರ 2 ನೇ ಹಂತ,
ಬೆಂಗಳೂರು.

**A2** ಪಿಂಕಿ ಚೆಡಿಲಾಲ್ ಮಲ್ಲ @ ಆರ್ಯ,
ಬಿನ್ ಡೆಡಿಲಾಲ್,
20 ವರ್ಷ,
ವಾಸಃ ನಂ. 301, 3 ನೇ ಅಂತಸ್ಥು,
ಇ-ವಿಂಗ್, ಮಿನಲ್ ಪಾರ್ಕ್,
ಈಸ್ಟ್ ದಹಿಸಾರ್,
ಬಾಂಬೆ 400 068.

<u>ದೋಷಾರೋಪಣೆ</u>

ನಾನು ಬಿ.ಎಸ್.ರೇಖಾ, ಬಿ.ಎ.(ಲಾ), ಎಲ್ಎಲ್.ಎಮ್, ಪ್ರಧಾನ ಜಿಲ್ಲಾ

ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು, ನೀವು-ಆರೋಪಿತರಾದ ಹೇಮಂತ್ ಕುಮಾರ್ ಜೆ ಮತ್ತು ಪಿಂಕಿ ಚೆಡಿಲಾಲ್ ಮಲ್ಲ @ ಆರ್ಯ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ:

ದಿನಾಂಕ 19.02.2009 ರಂದು ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರನಗರದ ಗಂಗಮ್ಮನಗುಡಿ ರಸ್ತೆಯಲ್ಲಿರುವ ಶ್ರೀಮತಿ. ಲಕ್ಷ್ಮಮ್ಮ ದೊಡ್ಡ ಮುನಿಯಪ್ಪನವರ ಕಲ್ಯಾಣ ಮಂಟಪದಲ್ಲಿ ಹಿರಿಯರ ನಿಶ್ಚಯದಂತೆ 1 ನೇ ಆರೋಪಿಯಾದ ನಿನ್ನ ಜೊತೆಗೆ ಮೃತೆ ವಿಜಯಶಾಂತಿ ರವರ ಮದುವೆಯಾಗಿದ್ದು ಹಾಗೂ ಮದುವೆಯಾದ ನಂತರ ಬೆಂಗಳೂರು ನಗರ ಅತ್ತಿಗುಪ್ಪೆ ಸ್ವಂತ ಮನೆಯಲ್ಲಿ 1 ನೇ ಆರೋಪಿಯಾದ ನಿನ್ನೊಂದಿಗೆ ಮೃತೆ ವಿಜಯಶಾಂತಿ ವಾಸವಾಗಿದ್ದು ನಂತರದ ದಿನಗಳಲ್ಲಿ ನಾಗರಭಾವಿಯಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದು ಮೃತೆ ವಿಜಯಶಾಂತಿ ಸಾಯುವುದಕ್ಕೆ ಮುಂಚೆ 8 - 10 ತಿಂಗಳ ಹಿಂದೆ ನಾಗರಭಾವಿಯ ಬಾಡಿಗೆ ಮನೆಯನ್ನು ಖಾಲಿ ಮಾಡಿ ಉಪಕಾರ್ ಲೇಔಟ್ ನಲ್ಲಿನ ಮನೆ ನಂ. 1082 ರಲ್ಲಿ 1 ನೇ ಆರೋಪಿಯಾದ ನಿನ್ನೊಂದಿಗೆ ವಾಸವಾಗಿದ್ದು 1 ನೇ ಆರೋಪಿಯಾದ ನೀನು ನಿನ್ನ ರಿಯಲ್ ಎಸ್ಟೇಟ್ ಆಫೀಸಿನಲ್ಲಿ ಅಡಿಟರ್ ಆಗಿ ಕೆಲಸ ಮಾಡುತ್ತಿದ್ದ 2 ನೇ ಆರೋಪಿಯಾದ ನಿನ್ನೊಂದಿಗೆ ರವರೊಂದಿಗೆ ಅನೈತಿಕ ಸಂಬಂಧ ಇಟ್ಟುಕೊಂಡಿದ್ದ ವಿಚಾರ ಮೃತೆ ವಿಜಯಶಾಂತಿಗೆ ತಿಳಿದು ಹಾಗೂ ಸದರಿ ವಿಚಾರವಾಗಿ ಚಾಸಾ. 1, 7, 12 ಮತ್ತು 13 ರವರುಗಳು 1 ನೇ ಆರೋಪಿಯಾದ ನಿನಗೆ ಬುದ್ಧಿವಾದ ಹೇಳಿದ್ದರೂ ಸಹ 1 ನೇ ಆರೋಪಿಯಾದ ನೀನು 2 ನೇ ಆರೋಪಿಯಾದ ನಿನ್ನೊಂದಿಗೆ ಅಕ್ರಮ ಸಂಬಂಧ ಮುಂದುವರೆಸಿದ್ದು, 2 ನೇ ಆರೋಪಿಯಾದ ನೀನು ರಾತ್ರಿ

1.00 ಮತ್ತು 2.00 ಗಂಟೆ ಸಮಯದಲ್ಲಿ ಮೃತೆ ವಿಜಯಶಾಂತಿ ರವರ ಮೊಬೈಲಿಗೆ ಕರೆ ಮಾಡಿ ನಾನು ಹೇಮಂತ್ ಕುಮಾರ್ ನಿಗೆ 2 ತಿಂಗಳ ಗರ್ಭಿಣಿಯಾಗಿದ್ದೇನೆ, ನಿನ್ನ ಗಂಡನನ್ನು ನನ್ನ ಬಳಿ ಕಳುಹಿಸು ಇಲ್ಲಾ ಅಂದರೆ ನಾನು ಕೈಯನ್ನು ಕೊಯ್ದುಕೊಳ್ಳುತ್ತೇನೆ ಎಂದು ಬೆದರಿಕೆ ಹಾಕಿ, ಮಾನಸಿಕವಾಗಿ ಹಿಂಸೆ ನೀಡುತಿದ್ದು ಹಾಗೂ 1 ನೇ ಆರೋಪಿಯಾದ ನಿನ್ನೊಂದಿಗೆ 2 ನೇ ಆರೋಪಿಯಾದ ನೀನು ಇಟ್ಟುಕೊಂಡಿದ್ದ ಅಕ್ರಮ ಸಂಬಂಧದ ಫೋಟೋಗಳನ್ನು 2 ನೇ ಆರೋಪಿಯಾದ ನೀನು ನಿನ್ನ ಮೊಬೈಲಿನಿಂದ ಮೆಸೆಜ್ ಹಾಗೂ ವಾಟ್ಸಪ್ ನಲ್ಲಿ, ಫೋಟೊಗಳನ್ನು ಚಾಸಾ. 7 ರವರ ಮೊಬೈಲಿಗೆ ಕಳುಹಿಸಿಕೊಟ್ಟು, ಮೃತೆ ವಿಜಯಶಾಂತಿಗೆ ಮಾನಸಿಕವಾಗಿ ಹಿಂಸೆ ನೀಡುತಿದ್ದು ಹಾಗೂ 1 ನೇ ಆರೋಪಿಯಾದ ನೀನು 2 ನೇ ಆರೋಪಿಯಾದ ನಿನಗೆ ಸಪೋರ್ಟ್ ಆಗಿ ಮೃತೆ ವಿಜಯಶಾಂತಿ ರವರಿಗೆ ಬೈದು ಗಲಾಟೆ ಮಾಡಿ, ನಾನು ನಿನ್ನನ್ನು ಬಿಟ್ಟರೆ ಬಿಡುತ್ತೇನೆ, ಆರ್ಯಾಳನ್ನು ಬಿಡುವುದಿಲ್ಲ, ನೀನು ಸತ್ತು ಹೋಗು ಅಂತ ಪ್ರಚೋದನೆ ಮಾಡಿ ಹಿಂಸೆ ನೀಡಿದ್ದರಿಂದ ಮೃತೆ ವಿಜಯಶಾಂತಿ ಮಾನಸಿಕವಾಗಿ ಮನನೊಂದು ದಿನಾಂಕ 05.04.2016 ರಂದು ಬೆಳಿಗ್ಗೆ 8.00 ಗಂಟೆ ಸಮಯದಲ್ಲಿ ಮನೆಯಲ್ಲಿದ್ದ ಸಲ್ಫ್ಯೂರಿಕ್ ಆಮ್ಲವನ್ನು ತನ್ನ ಮೈಮೇಲೆ ಸುರಿದುಕೊಂಡಿದ್ದರಿಂದ ಸುಟ್ಟಗಾಯಗಳಾಗಿ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವಾಗ ಚಿಕಿತ್ಸೆ ಫಲಕಾರಿಯಾಗದೇ ದಿನಾಂಕ 12.04.2016 ರಂದು ಬೆಳಿಗ್ಗೆ 08.45 ಗಂಟೆ ಸಮಯದಲ್ಲಿ ಮೃತ ಪಟ್ಟಿದ್ದು ಹಾಗೂ ಆಕೆಯ ಸಾವಿಗೆ ಆರೋಪಿತರಾದ ನೀವು ಪ್ರಚೋದನೆ ನೀಡಿದ ಕಾರಣ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವ ಭಾರತೀಯ ದಂಡ ಸಂಹಿತೆ ಕಲಂ

306 ಸಹವಾಚಕ 34 ರನ್ವಯ ಅಪರಾಧ ಮಾಡಿರುತ್ತೀರಿ.

ಈ ಅಪರಾಧವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಇದ್ದು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ಈ ಮೂಲಕ ನಿರ್ದೇಶಿಸುತ್ತೇನೆ.

**(ಈ ದಿನ ದಿನಾಂಕ 25 ನೇ ಮೇ, 2026)**

**(ಶ್ರೀಮತಿ ಬಿ.ಎಸ್.ರೇಖಾ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ,
ಬೆಂಗಳೂರು.

**IN THE COURT OF THE PRL. DISTRICT AND SESSIONS JUDGE, BENGALURU RURAL DISTRICT, BENGALURU.**

**SC No. 274/2021**

| | | |
|---|---|---|
| Complainant | : | Byadarahalli Police station |

V/s

| | | |
|---|---|---|
| Accused | : | Hemanth Kumar J |

**PLEA OF THE ACCUSED**

1. Have you understood the charge framed, read over and explained to you?

   Ans:

2. Do you plead guilty or claims to be tried?

   Ans:

(Charges are framed and read over to the accused in his own language on 25.05.2026)

(Smt.B.S.Rekha)
Prl. District and Sessions Judge,
Bengaluru Rural District,
Bengaluru.

Signature of the accused No. 1.

**IN THE COURT OF THE PRL. DISTRICT AND SESSIONS JUDGE, BENGALURU RURAL DISTRICT, BENGALURU.**

**SC No. 274/2021**

Complainant : Byadarahalli Police station

V/s

Accused : Pinki Chedilal Mallah @ Arya

**PLEA OF THE ACCUSED**

1. Have you understood the charge framed, read over and explained to you?

   Ans:

2. Do you plead guilty or claims to be tried?

   Ans:

(Charges are framed and read over to the accused in his own language on 25.05.2026)

(Smt.B.S.Rekha)
Prl. District and Sessions Judge,
Bengaluru Rural District,
Bengaluru.

Signature of the accused No. 2.